ಅವನ ಮುಖ ಕಪ್ಪಿಟ್ಟಿತು. ಅನುಭವ ಇರುವವನಾದ್ದರಿಂದ ಮುಖದ ಮೇಲೆ ಯಾವ ಭಾವನೆ ತೋರ್ಪಡಿಸದೆ 'ನಾಯಕನೇ ಇರದಿದ್ದರೆ ಎಲ್ಲವೂ ಅಸ್ತವ್ಯಸ್ತವಾಗಿಬಿಡುತ್ತದೆ, ನಾಯಕರು ಸಿದ್ಧಾಂತವನ್ನು ವ್ಯಾಪ್ತಿಗೊಳಿಸುತ್ತಾರೆ. ಸೈನಿಕರು ಅವರ ಪರವಾಗಿ ಹೋರಾಡುತ್ತಾರೆ' ಎಂದನು. ಆವೇಶದಿಂದ ಮಾತನಾಡಿದ್ದರಿಂದ ಅವನ ತೆಲುಗಿನಲ್ಲಿ ವ್ಯತ್ಯಾಸ ಕಾಣಿಸಿತು. ಕಾಶ್ಮೀರಿಗಳು ಆಡುವ ಭಾಷೆಯನ್ನು 'ಕೋಶೂರ್' ಎನ್ನುತ್ತಾರೆ. ಅವನ ಉಚ್ಚಾರಣೆ ಗಮನಿಸಿ 'ನೀವು ತೆಲುಗಿನವರ ಹಾಗಿಲ್ಲವಲ್ಲ!' ಎಂದಳು.

'ಸಣ್ಣ ವಯಸ್ಸಿನಲ್ಲೇ ಕಾಶ್ಮೀರದಲ್ಲಿ ಸೆಟ್ಲ್ ಆದೆ'

ಅವಳಿಗೆ ಒಂದು ಪಾಯಿಂಟ್ ಸಿಕ್ಕ ಹಾಗಾಯ್ತು. 'ನಿಮ್ಮ ಕಾಶ್ಮೀರವನ್ನೇ ತೆಗೆದುಕೊಳ್ಳಿ. ಅದು ಸ್ವತಂತ್ರವಾದ ಬೇಕೆಂದೋ, ಪಾಕಿಸ್ತಾನ್‌ನಲ್ಲಿ ವಿಲೀನವಾಗಬೇಕೆಂದೋ ವಾದಿಸುವ ಉಗ್ರವಾದಿಗಳು ಚೆನ್ನಾಗಿದ್ದಾರೆ. ಸಾಮಾನ್ಯ ಜನ ಮಾತ್ರ ಬಲಿಯಾಗುತ್ತಿದ್ದಾರೆ' ಎಂದಳು.

ಮಿಜ್ರಾಡಿನ್‌ನ ಮುಷ್ಟಿ ಬಿಗಿಯಿತು. ಸುತ್ತಲೂ ಜನ ಇರದಿದ್ದರೆ ಏನಾಗುತ್ತಿತ್ತೋ! ಅತಿ ಕಷ್ಟದಿಂದ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು 'ಅವರು ಉಗ್ರವಾದಿಗಳಲ್ಲ, ಬಿಸಿಲು, ಮಳೆ, ಚಳಿ ಎನ್ನದೆ ತಮ್ಮ ಸಿದ್ಧಾಂತಕ್ಕಾಗಿ ಹೋರಾಡುತ್ತಿದ್ದಾರೆ. ನೀವು ಇಲ್ಲಿ ಎ.ಸಿ. ರೂಮ್‌ನಲ್ಲಿ ಕುಳಿತು ಅಲ್ಲಿನ ಪರಿಸ್ಥಿತಿ ಕುರಿತು ಅಂದಾಜು ಮಾಡುವುದು ತಪ್ಪು' ಎಂದನು.

ಅವಳು ಎದುರು ವಾದಿಸಿದಳು. 'ಎ.ಸಿ. ರೂಂನಲ್ಲಿ ಯಾರು ಕುಳಿತುಕೊಳ್ಳುತ್ತಿಲ್ಲ? ಸೈಯದ್ ಸಲಾಹುದ್ದೀನ್, ಅಬ್ದುಲ್ ಅಜೀಜ್‌ದಾರ್.. ಮಿರ್ವಾಜ್, ಉಮರ್ ಫರೂಕ್.. ಸೈಯದ್ ಗಿಲಾನಿ ಇವರೆಲ್ಲರ ಮಕ್ಕಳು ಡಾಕ್ಟರ್ಸ್, ಇಂಜಿನಿಯರ್ಸ್ ಆಗಿ ಪ್ರಶಾಂತವಾಗಿ ಎ.ಸಿ. ರೂಂ.ಗಳಲ್ಲಿ ಬದುಕುತ್ತಿದ್ದಾರೆ. ಸಾಮಾನ್ಯ ಜನ ಮಾತ್ರ ಬ್ಲಾಸ್ಟ್‌ಗಳಲ್ಲಿ ಸಾಯುತ್ತಿದ್ದಾರೆ' ಎಂದಳು.

ಸುತ್ತಲೂ ಇದ್ದವರು ಇವರಿಬ್ಬರ ಮಾತುಗಳನ್ನು ಆಶ್ಚರ್ಯದಿಂದ ಕೇಳುತ್ತಿದ್ದರು.

ಅವಳು ಹೇಳಿದಳು, 'ಬಿನ್ ಲಾಡೆನ್‌ನ ಉದಾಹರಣೆ ತೆಗೆದುಕೊಂಡರೆ ಹೆಂಡತಿಯೊಂದಿಗೆ ಅವನು ಪಾಕಿಸ್ತಾನ್‌ಗೆ ಓಡಿ ಹೋದನು. ಅನುಚರ ಕಸಬ್ ಮಾತ್ರ ನೇಣುಗಂಬದ ಪಾಲಾದನು'.

ಲಾಡೆನ್ ಪ್ರಸ್ತಾಪ ಬಂದಿದ್ದರಿಂದ ಮಿಜ್ರಾಡಿನ್ ತಾಳ್ಮೆ ಕಳೆದುಕೊಂಡನು. ಏಕವಚನದಲ್ಲಿ ಸಂಬೋಧಿಸುತ್ತ 'ಏನು ಮಾತಾಡ್ತಿದ್ದೀಯ ನೀನು? ಇಡೀ ಮಾನವ ಕುಲವನ್ನು ಒಂದೇ ಧರ್ಮಕ್ಕೆ ಸೇರಿಸಬೇಕೆಂಬ ಸತ್ಸಂಕಲ್ಪದಿಂದ ಪ್ರಾಣತ್ಯಾಗ ಮಾಡಿದ ಧರ್ಮ ಪ್ರಚಾರಕ ಆ ಬಿನ್ ಲಾಡೆನ್' ಎಂದು ಆವೇಶದಿಂದ ಹೇಳಿದನು.

ಅವಳು ಕೂಡ ಅಷ್ಟೇ ಸ್ಥಿರವಾಗಿ 'ಮತ ಎನ್ನುವುದು 'ಮತ್' ಎಂಬ ಸಂಸ್ಕೃತ ಶಬ್ದದಿಂದ ಬಂದಿದ್ದು. ಮತ್ ಎಂದರೆ 'ನನ್ನಿಷ್ಟ' ಎಂದರ್ಥ. ತಮತಮಗೆ ಇಷ್ಟವಾದ ದೇವರನ್ನು ಆರಾಧಿಸಬಹುದು ಎನ್ನುವುದೇ ನಿಜವಾದ ಮತ! ಇಷ್ಟು ಸಣ್ಣ ವಿಷಯವನ್ನು ಅರ್ಥ ಮಾಡಿಕೊಳ್ಳದ ತೀವ್ರವಾದಿಗಳು 'ಜಿಹಾದ್' ಹೆಸರಿನಲ್ಲಿ ತಮ್ಮ ಮತವನ್ನು ನಂಬದ ಜನರನ್ನು ಕೊಲ್ಲುತ್ತಿದ್ದಾರೆ' ಎಂದಳು.

ಸಹ ವಿದ್ಯಾರ್ಥಿಗಳು ಅವಳ ತಿಳುವಳಿಕೆಗೆ ಆಶ್ಚರ್ಯಪಟ್ಟರು. ಆ ಮಾತಿಗೆ ಮಿಜ್ರಾಡಿನ್ ಹೇಗೆ ಪ್ರತಿಕ್ರಿಯಿಸುತ್ತಿದ್ದನೋ, ಅದರೆ ಅಷ್ಟರಲ್ಲಿ ಸ್ಟೇಷನ್ ಬಂದಿತ್ತು.

ಅವನು ಟ್ರೇನ್ ಇಳಿದು ಸುತ್ತ ನೋಡಿದನು. ಪ್ಲಾಟ್ ಫಾರಂ ತುಂಬ ಜನಸಂದಣಿ ಇತ್ತು. ಆಗ ಗಫಾರ್‌ಖಾನ್ 'ಅಸ್ಸಲಾಂ ಅಲೇಕುಂ' ಎನ್ನುತ್ತ ಅವನ ಬಳಿಗೆ ಬಂದನು.

'ಅಲೇಕುಂ ಸಲಾಂ ವ ರಹ್ಮತುಲ್ಲಾಹಿ ವ ಬರಕತೂಮ್' ಎಂದನು ಮಿಜ್ರಾಡಿನ್. ಅವನನ್ನು ತಬ್ಬಿ, ಬ್ಯಾಗ್ ತೆಗೆದುಕೊಂಡು 'ಒಂದು ನಿಮಿಷ ಇರು ಭಾಯ್, ಇದೇ ಟ್ರೇನ್‌ನಲ್ಲಿ ನನ್ನ ಮಗಳು ಕೂಡ ಬಂದಿದ್ದಾಳೆ' ಎಂದು ಖಾನ್ ಹೇಳುತ್ತಿರುವಾಗಲೇ ಕಲ್ಯಾಣಿ ಅಲ್ಲಿಗೆ ಬಂದಳು. ಖಾನ್ ಪರಿಚಯ ಮಾಡಿಸಿದನು.

ಮಿಜ್ರಾಡಿನ್‌ಗೆ ಷಾಕ್ ಆಯಿತು. ಕಲ್ಯಾಣಿ ಮಾತ್ರ ಗಲಿಬಿಲಿಗೊಳ್ಳಲಿಲ್ಲ. ಕೈಜೋಡಿಸಿ ನಮಸ್ಕರಿಸುತ್ತಾ 'ನನ್ನ ಸ್ನೇಹಿತ ಇದೇ ಟ್ರೇನ್‌ನಲ್ಲಿ ಬರುತ್ತಾರೆ ಅಂತ ಅಪ್ಪ ಹೇಳಿದ್ದರು. ನೀವು 'ಕಾಶ್ಮೀರ್' ಎಂದಾಗಲೇ ಅಂದುಕೊಂಡೆ ನೀವೇ ಇರಬಹುದು ಅಂತ' ಎಂದಳು ಕಲ್ಯಾಣಿ.

—4—

ಸ್ನಾನಪಾನಾದಿಗಳ ನಂತರ ಸ್ನೇಹಿತರಿಬ್ಬರು ಮಾತನಾಡುತ್ತಾ ಕುಳಿತರು. 'ನೀನು ಹೇಳಿದ್ದು ಈ ಹುಡುಗಿಯ ಬಗ್ಗೆ ಅನ್ನು' ಎಂದನು ಮಿಜ್ರಾಡಿನ್.

'ಹೌದು ಭಾಯ್, ಅವಳ ಅಪ್ಪ ಕೂಡ ನಿನ್ನ ಹಾಗೆ ಬಹಳ ಹಳೆಯ ಸ್ನೇಹಿತ. ಹೆಂಡತಿ ಸತ್ತ ಮೇಲೆ ಸನ್ಯಾಸಿಯಾಗಿ ಹಿಮಾಲಯಕ್ಕೆ ಹೊರಟು ಹೋದನು. ಅವನ ಮಗಳೇ ಈ ಹುಡುಗಿ'

'ಮತ ಮಾತ್ರವೇ ಅಲ್ಲ, ಹೆಸರು ಕೂಡ ಬದಲಾಯಿಸದೇ ಬೆಳೆಸುತ್ತಿದ್ದೀಯ!'

ಖಾನ್ ನಕ್ಕು ಸುಮ್ಮನಿದ್ದನು. ಅಷ್ಟರಲ್ಲಿ ಕಲ್ಯಾಣಿ ಅಲ್ಲಿಗೆ ಬಂದಳು. ಪ್ರಯಾಣದಲ್ಲಿ ಬಳಲಿಕ್ಕೆ ಹೋಗಲಿಕ್ಕೆ ತಲೆಸ್ನಾನ ಮಾಡಿದ ಅವಳು ಬಿರಿದ ಮಲ್ಲಿಗೆ ಹಾಗಿದ್ದಳು.

'ಐ.ಐ.ಟಿ. ನಂತರ ಏನು ಮಾಡಬೇಕೆಂದಿದ್ದೀಯ ಬೇಟಾ?' ಎಂದು ಕೇಳಿದನು ಖಾನ್.

ಅವಳು ಹೆಮ್ಮೆ, ಆತ್ಮವಿಶ್ವಾಸದಿಂದ 'ನಮ್ಮ ಫ್ಯಾಕ್ಟರಿಯನ್ನು ದೇಶದಲ್ಲೇ ನಂಬರ್ ಒನ್ ಮಾಡುತ್ತೇನೆ' ಎಂದಳು.

ಮಿಜ್ರಾಡಿನ್ ಒಬ್ಬ ದೊಡ್ಡ ಪ್ಲಾನರ್. ಒಂದು ವಿಧ್ವಂಸಕ ಕೃತ್ಯ ಎಸಗುವಾಗ ಯಾರೆಲ್ಲ , ಎಲ್ಲೆಲ್ಲಿ, ಯಾವ್ಯಾವ ಕೆಲಸವನ್ನು ಮಾಡಬೇಕೆಂದು ನೂರು ಮಂದಿ ಅನುಚರರಿಗೆ ಸ್ವಲ್ಪವೂ ವ್ಯತ್ಯಾಸ ಬರದಂತೆ ಸೂಚನೆ ಕೊಡಬಲ್ಲ ಸಂಚುಗಾರ. ಎಷ್ಟು ಆತಂಕ ಎದುರಾದರೂ ಹಿಂಜರಿಯದವನು. ಆದರೆ ಅವನಲ್ಲಿ ಒಂದು ಸಣ್ಣ ಬಲಹೀನತೆ.. ಧರ್ಮದ ಪ್ರಸ್ತಾಪ ಬಂದರೆ ತನ್ನ ಸ್ಥಾನಮಾನ, ಹೊಣೆಗಾರಿಕೆ ಮರೆತು ಆವೇಶದಿಂದ ವಾದಿಸುತ್ತಾನೆ.

ಅವಳು ಆಡಿದ ಮಾತು ಕೇಳಿ ಧ್ವನಿ ಏರಿಸಿ 'ಇಂಡಿಯಾದಲ್ಲಿ ಮುಸ್ಲಿಂ ಆದವನ್ಯಾರು ನಂಬರ್ ಒನ್ ಆಗಲಾರ ಬೇಟಾ' ಎಂದನು.

ಕಲ್ಯಾಣಿ ಕೂಡ ಅದೇ ಸ್ವರದಲ್ಲಿ 'ಸಂಕಲ್ಪ ಒಳ್ಳೆಯದಾದರೆ ಯಶಸ್ಸು ಆರತಿ ಬೆಳಗುತ್ತದೆ ಅಂಕಲ್. ಆಶಯ ಕೆಟ್ಟದಾದರೆ ಆಕಳಿಕೆ ಕೂಡ ಹಾರ್ಟ್ ಅಟ್ಯಾಕ್‌ನ ಹಾಗಿರುತ್ತದೆ' ಎಂದಳು.

ಅವನಿಗೆ ಷಾಕ್ ತಗುಲಿದ ಹಾಗಾಯ್ತು. ಅವನು ನಾಯಕನಾದ್ದರಿಂದ, ಏನೇ ಹೇಳಿದರೂ ಅವನ ಅನುಚರರಿಂದ ಎದುರುತ್ತರ ಇರುತ್ತಿರಲಿಲ್ಲ. ಆದರೆ ಈಗ ಅವನಿರುವುದು ದಕ್ಷಿಣ ಕಾಶ್ಮೀರದಲ್ಲಲ್ಲ, ದಕ್ಷಿಣ ಭಾರತದಲ್ಲಿ.

ಇಬ್ಬರ ಮಾತುಗಳನ್ನು ಕೇಳಿ ಖಾನ್ ಹೆದರಿದನು. ಬಂದಿರುವವನು ಅತಿಥಿ. ತನ್ನ ಮಗಳ ವಿಷಯ ಚೆನ್ನಾಗಿ ಗೊತ್ತಿತ್ತು. ವಾದ ಮಾಡಲಿಕ್ಕೆ ಪ್ರಾರಂಭಿಸಿದರೆ ನಿಲ್ಲಿಸುವವಳಲ್ಲ. ಮಗಳನ್ನು ಗದರಿಸುವಷ್ಟರಲ್ಲಿ ಅವಳು ಹೇಳಿದಳು. 'ನಮ್ಮ ದೇಶದಲ್ಲಿ ಎಷ್ಟು ಮುಸಲ್ಮಾನರು ನಂಬರ್ ಒನ್ ಸ್ಥಾನದಲ್ಲಿದ್ದಾರೆಂದು ಬಹುಶಃ ನಿಮಗೆ ತಿಳಿದಿಲ್ಲ. ಸಿಪ್ಲಾ ಫಾರ್ಮಾಸ್ಯುಟಿಕಲ್ ಯಜಮಾನ ಯೂಸುಫ್ ಹಮೀದ್ ಪದ್ಮಭೂಷಣ ಪಡೆದಿರುವ ಮುಸ್ಲಿಂ. ಪ್ರೆಸ್ಟೀಜ್ ಎಂ.ಡಿ. ಇರ್ಫಾನ್ ರಜಾಕ್ ಆಸ್ತಿ ಐದು ಮಿಲಿಯನ್ ಡಾಲರ್ಸ್. ಇಂಡಿಯಾ ನಂಬರ್ ಕಂಪನಿ 'ವಿಪ್ರೋ'ದ ಚೇರ್ಮನ್ ಅಜೀಂ ಪ್ರೇಮ್‌ಜಿ ಪಾಕಿಸ್ತಾನ್‌ನಲ್ಲಿ ಹುಟ್ಟಿ ಇಂಡಿಯಾದಲ್ಲಿ ಸೆಟ್ಲ್ ಆದವರು' ಎಂದು ಸ್ವಲ್ಪ ತಡೆದು 'ಅಂಕಲ್ ಪಾಕಿಸ್ತಾನ್‌ನಲ್ಲಿರುವ ಕೋಟೀಶ್ವರರಲ್ಲಿ ಒಬ್ಬ ಹಿಂದೂ ಹೆಸರು ಹೇಳಬಲ್ಲಿರಾ?' ಎಂದು ಪ್ರಶ್ನಿಸಿದಳು.

ಮಿಜ್ರಾಡಿನ್ ಮುಖ ಕೆಂಪಾಯಿತು.

ಗಾಯದ ಮೇಲೆ ಉಪ್ಪು ಚೆಲ್ಲಿದ ಹಾಗೆ 'ಭಾರತ ಹತ್ತು ಮಂದಿ ಮುಸಲ್ಮಾನರಿಗೆ ಭಾರತರತ್ನ ಕೊಟ್ಟಿದೆ. ಒಬ್ಬ ಹಿಂದೂಗಾದರೂ ಪಾಕಿಸ್ತಾನ ಸಿತಾರ—ಏ—ಪಾಕಿಸ್ತಾನ್ ಬಿರುದು ಕೊಟ್ಟಿದೆಯಾ?' ಎಂದು ಕೇಳಿದಳು.

ಮಿಜ್ರಾಡಿನ್‌ನ ಮುಖ ಇನ್ನಷ್ಟು ಕೆಂಪಾಯಿತು. ಅವನು ಏನೋ ಹೇಳುವುದರೊಳಗೆ ಫೋನ್ ಸದ್ದು ಕೇಳಿಸಿತು. ಸ್ನೇಹಿತನ ಮುಖಭಾವವನ್ನು ಗಮನಿಸುತ್ತಿದ್ದ ಖಾನ್, ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನದಲ್ಲಿ 'ಸ್ವಲ್ಪ ಫೋನ್ ತಂದು ಕೊಡ್ತೀಯಾ ಬೇಟಾ' ಎಂದು ಮಗಳನ್ನು ಒಳಗೆ ಕಳಿಸಿ 'ಸಣ್ಣ ಹುಡುಗಿ ಭಾಯ್, ತಪ್ಪು ತಿಳಿಯಬೇಡ' ಎಂದನು.

ಮಿಜ್ರಾಡಿನ್ ಮಾತನಾಡಲಿಲ್ಲ.

ಅಷ್ಟರಲ್ಲಿ ಕಲ್ಯಾಣಿ ಫೋನ್ ತೆಗೆದುಕೊಂಡು ಬಂದಳು. ಅವನು ಅದನ್ನು ಆನ್ ಮಾಡಿ, ಮುಖ ಗಂಟು ಹಾಕಿ 'ರಾಂಗ್ ನಂಬರ್' ಎಂದು ಕಾಲ್ ಕಟ್ ಮಾಡಿದನು.

ಅವನು ಆ ರೀತಿ ಹೇಳಿದ್ದೇ ಈ ಕಥೆಗೆ ಒಂದು ಅನೂಹ್ಯವಾದ ತಿರುವನ್ನು ನೀಡಿತು.

**(ಸಶೇಷ)**